₹ 5
ಸಂಪುಟ: 4 ಸಂಚಿಕೆ: 259 ಪುಟಗಳು: 10+4
20.09.2019 ಶುಕ್ರವಾರ
ಬೆಂಗಳೂರು | ಹುಬ್ಬಳ್ಳಿ | ಮಂಗಳೂರು
ದಾವಣಗೆರೆ | ಕಲಬುರಗಿ | ಬೆಳಗಾವಿ
@vishwavaninews
vishwavanitimely
epaper.vishwavani.news
vishwavani.news
ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ದಾರಿದೀಪೋಕ್ತಿ

ನೀವು ಎಷ್ಟೇ ಸುಶಿಕ್ಷಿತರಾಗಿರಿ, ಶ್ರೀಮಂತರಾಗಿರಿ, ಅಧಿಕಾರದಲ್ಲಿರಿ, ನೀವು ಬೇರೆಯವರನ್ನು ಹೇಗೆ ನಡೆಸಿಕೊಳ್ಳುತ್ತೀರಿ ಎಂಬುದರ ಮೇಲೆ ನಿಮ್ಮ ವ್ಯಕ್ತಿತ್ವವನ್ನು ನಿರ್ಧರಿಸುತ್ತಾರೆ. ನಿಮ್ಮ ನಡತೆಯೇ ವ್ಯಕ್ತಿತ್ವದ ಕೈಗನ್ನಡಿ. ಅದೇ ಸರಿ ಇಲ್ಲದಿದ್ದರೆ ಎಷ್ಟಿದ್ದರೇನಂತೆ?

ವಿಶ್ವವಾಣಿ
ವಿಶ್ವಾಸವೇ ವಿಶ್ವ

ದಮಯಂತಿ ಅವತಾರದಲ್ಲಿ **ರಾಧಿಕಾ**

ಹಳ್ಳಿಯ ಹೃದನಾದ ಆನಂದ್ ಗಣೇಶ್ !

ಸಿನಿಮಾಸ್

ಸಂ.ಪುಟ 6

ಜಗತ್ತನ್ನು ಬದಲಿಸುವ ಮೊದಲು ನಿನ್ನನ್ನು ಬದಲಿಸಿಕೋ!

ಗುರುಮನ
ಗೌರ್ ಗೋಪಾಲ್

ಪ್ರಮುಖ ಸುದ್ದಿ

ಪೆಟ್ರೋಲ್ ಮತ್ತೆ ದುಬಾರಿ

ಬೆಂಗಳೂರು: ಕಚ್ಚಾ ತೈಲ ಬಿಕ್ಕಟ್ಟಿನಿಂದಾಗಿ ಭಾರತದಲ್ಲಿ ಪೆಟ್ರೋಲ್, ಡೀಸೆಲ್ ದರಗಳು ದಿನದಿಂದ ದಿನಕ್ಕೆ ಏರುತ್ತಲೇ ಇವೆ. ಬೆಂಗಳೂರಿನಲ್ಲಿ ಗುರುವಾರ ಪ್ರತಿ ಲೀಟರ್ ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಕ್ರಮವಾಗಿ 30 ಪೈಸೆ ಮತ್ತು 20 ಪೈಸೆ ಹೆಚ್ಚಾಗಿದೆ. ಮೂರು ದಿನಗಳಲ್ಲಿ ಪೆಟ್ರೋಲ್ 70 ಪೈಸೆ ಮತ್ತು ಡೀಸೆಲ್ ದರ 60 ಪೈಸೆಗಳಷ್ಟು ಏರಿಕೆಯಾಗಿದೆ. ಇದರಿಂದ ಪೆಟ್ರೋಲ್ ₹ 75.19 ಮತ್ತು ಡೀಸೆಲ್ ₹ 68.26ಕ್ಕೆ ತಲುಪಿದೆ.

ಮುಂಬೈನಲ್ಲಿ ಮತ್ತೆ ಮಳೆ ಅಬ್ಬರ

ಮುಂಬೈ: ಭಾರಿ ಮಳೆಯಿಂದ ತತ್ತರಿಸಿ ಹೋಗಿರುವ ಮುಂಬೈನಲ್ಲಿ ಮತ್ತೆ ಮಳೆ ಸುರಿಯುತ್ತಿದ್ದು, ಗುರುವಾರ ಶಾಲಾ, ಕಾಲೇಜುಗಳಿಗೆ ರಜೆ ಘೋಷಿಸಲಾಗಿತ್ತು. ಹವಾಮಾನ ಇಲಾಖೆ ಮುಂಬೈ ಮತ್ತು ಸುತ್ತಮುತ್ತಲಿನ ನಗರಗಳಿಗೆ ರೆಡ್ ಅಲರ್ಟ್ ಘೋಷಣೆ ಮಾಡಿದ್ದು, ಮಳೆ ಕೊರತೆ ಎದುರಿಸುತ್ತಿರುವ ಲಾತೂರ್, ಬೀಢ್ ಮತ್ತು ನಾಂದೇಡ್ ಪ್ರದೇಶಗಳಿಗೂ ಸಹ ಹವಾಮಾನ ಇಲಾಖೆ ಹಳದಿ ಎಚ್ಚರಿಕೆ ನೀಡಿದೆ. ವಾಣಿಜ್ಯ ನಗರಿಯಲ್ಲಿ ಸೆಪ್ಟೆಂಬರ್ ತಿಂಗಳಲ್ಲಿ ಇಲ್ಲಿಯವರೆಗೆ 915 ಮಿಲಿ ಮೀಟರ್ ಮಳೆಯಾಗಿರುವುದು ದಾಖಲೆಯಾಗಿದೆ.

ಭಾರತೀಯ ವಾಯುಪಡೆಗೆ ನೂತನ ಮುಖ್ಯಸ್ಥ

ದೆಹಲಿ: ಏರ್ ಮಾರ್ಷಲ್ ರಾಕೇಶ್ ಕುಮಾರ್ ಸಿಂಗ್ ಭದೌರಿಯಾ ಅವರನ್ನು ಭಾರತೀಯ ವಾಯುಪಡೆಯ ನೂತನ ಮುಖ್ಯಸ್ಥರನ್ನಾಗಿ ಕೇಂದ್ರ ಸರಕಾರ ಗುರುವಾರ ನೇಮಿಸಿದೆ. ಸೆಪ್ಟೆಂಬರ್ 30ರಂದು ನಿವೃತ್ತರಾಗಲಿರುವ ವಾಯುಪಡೆ ಮುಖ್ಯಸ್ಥ ಬಿ.ಎಸ್. ಧನೋವಾ ಅವರ ಸ್ಥಾನವನ್ನು ಅಲಂಕರಿಸಲಿದ್ದಾರೆ.

ವಕ್ರತುಂಡೋಕ್ತಿ

ನಿಮ್ಮ ಬಗ್ಗೆ ನಿಮಗೆ ಗೊತ್ತಿಲ್ಲದ ಅನೇಕ ಸಂಗತಿಗಳು ಗೊತ್ತಾಗುವುದು ಕಾರ್ಯಕ್ರಮಗಳಲ್ಲಿ ನಿಮ್ಮ ಪರಿಚಯಿಸುವಾಗ.

ಡಿಕೆಶಿ @ ತಿಹಾರ್ ಜೈಲ್ ಲಕ್ಷ್ಮೀಗೆ ಇ.ಡಿ ಡ್ರಿಲ್

ಸೆಲ್ ನಂ.7ರಲ್ಲಿ ಬಂಡೆ | ಪಕ್ಕದ ಸೆಲ್‌ನಲ್ಲಿ ಚಿದಂಬರಂ

ಜಾಮೀನು ಅರ್ಜಿ ವಿಚಾರಣೆ ಶನಿವಾರಕ್ಕೆ ಮುಂದೂಡಿಕೆ

ದೆಹಲಿ: ಕೊಟ್ಯಂತರ ರೂಪಾಯಿ ಅಕ್ರಮ ಹಣ ವಹಿವಾಟಿನ ಆರೋಪದ ಮೇಲೆ ಜಾರಿ ನಿರ್ದೇಶನಾಲಯ(ಇಡಿ) ಅಧಿಕಾರಿಗಳಿಂದ ಬಂಧಿತರಾಗಿರುವ ಮಾಜಿ ಸಚಿವ ಡಿ.ಕೆ. ಶಿವಕುಮಾರ್ ಅವರನ್ನು ಬಿಗಿ ಪೊಲೀಸ್ ಬಂದೋಬಸ್ತ್‌ನಲ್ಲಿ ಗುರುವಾರ ತಿಹಾರ್ ಜೈಲಿಗೆ ಸ್ಥಳಾಂತರಿಸಲಾಯಿತು.

ವಿಶೇಷ ನ್ಯಾಯಾಲಯ ಅವರನ್ನು 14 ದಿನ ನ್ಯಾಯಾಂಗ ಬಂಧನಕ್ಕೆ ಇ.ಡಿ ವಿಶೇಷ ನ್ಯಾಯಾ ಲಯ ಒಪ್ಪಿಸಿತ್ತು. ಡಿಕೆಶಿ ಆರೋಗ್ಯದಲ್ಲಿ ಏರುಪೇರಾಗಿದ್ದರಿಂದ ಅವರಿಗೆ ದೆಹಲಿಯ ರಾಮ್ ಮನೋಹರ್ ಲೋಹಿಯಾ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿತ್ತು. ಆರೋಗ್ಯ ಸ್ಥಿರವಾದ ಹಿನ್ನೆಲೆಯಲ್ಲಿ ತಿಹಾರ್ ಜೈಲಿಗೆ ಸ್ಥಳಾಂತರ ಮಾಡಲಾಯಿತು.

ಚಿದು ಪಕ್ಕದ ಸೆಲ್‌ನಲ್ಲಿ ಡಿಕೆ: ತಿಹಾರ್ ಜೈಲಿನ ಸೆಲ್ ನಂ-7ರಲ್ಲಿ ಡಿಕೆಶಿ ಅವರನ್ನು ಇಡಲಾಗಿದೆ ಎಂದು ಹೇಳಲಾಗಿದೆ. ಮಾಜಿ ವಿತ್ತ ಸಚಿವ ಚಿದಂಬರಂ ಇರುವ ಕೊಠಡಿಯ ಪಕ್ಕದಲ್ಲೇ ಡಿಕೆಶಿಯನ್ನು ಇರಿಸಲಾಗಿದೆ. ಅಕ್ಟೋಬರ್ 1ರ ವರೆಗೂ ಡಿಕೆಶಿ ಅಲ್ಲೇ ಕಾಲ ಕಳೆಯಬೇಕಾಗಿದೆ.

ಜಾಮೀನು ಅರ್ಜಿ ವಿಚಾರಣೆ ಮತ್ತೆ ಮುಂದಕ್ಕೆ

ಡಿಕೆ ಶಿವಕುಮಾರ್ ಅವರ ಜಾಮೀನು ಅರ್ಜಿ ವಿಚಾರಣೆಯನ್ನು ವಿಶೇಷ ಕೋರ್ಟ್ ಶನಿವಾರ ಬೆಳಗ್ಗೆ 11 ಗಂಟೆಗೆ ಮುಂದೂಡಿತು. ಗುರುವಾರ ಮಧ್ಯಾಹ್ನ 3.30ಕ್ಕೆ ವಿಚಾರಣೆ ಆರಂಭವಾದಾಗ ಮೊದಲಿಗೆ ಇಡಿ ಪರ ವಕೀಲರಾದ ಕೆ.ಎಂ. ನಟರಾಜ್ ಅವರು ವಾದ ಮಂಡಿಸಿ, ಡಿಕೆಶಿ ಅವರ ಕೆಲವು ಹಣಕಾಸಿನ ವ್ಯವಹಾರದ ಬಗ್ಗೆ ತನಿಖೆಯಾಗಬೇಕಿದೆ. ಮುಖ್ಯವಾಗಿ ಹಣ ವರ್ಗಾವಣೆ ಬಗ್ಗೆ ತನಿಖೆ ಆಗಬೇಕಿದೆ. ಕೇವಲ ಐಟಿ ಕಾಯ್ದೆಯಡಿ ಬರುವುದಿಲ್ಲ. ಪರೋಕ್ಷವಾಗಿ ಪಿಎಂಎಲ್ಎ ಅಡಿ ಬರುತ್ತದೆ ಎಂದು ಹೇಳಿದರು. ಡಿಕೆಶಿ ಅವರ ಆದಾಯ ಮೂಲ ಯಾವುದು? ಅದನ್ನು ಪತ್ತೆಹಚ್ಚಬೇಕಲ್ಲವೇ? ಹಫ್ತಾ ನೀಡಿ ಕೊಲೆ ಮಾಡಿಸಿದರೆ ಎಷ್ಟು ಹಫ್ತಾ ನೀಡಿದ್ದಾರೆ ಎಂಬುದು ಮುಖ್ಯವಾಗುವುದಿಲ್ಲ. ಕೊಲೆ ಮಾಡಿಸಲು ಹಫ್ತಾ ನೀಡಿದ್ದಾರೆ ಎನ್ನುವುದಷ್ಟೇ ಮುಖ್ಯ. ಡಿಕೆಶಿ ಪ್ರಕರಣದಲ್ಲಿ ಹಣದ ಮೌಲ್ಯಕ್ಕಿಂತ ಅವರು ಮನಿ ಲಾಂಡ್ರಿಂಗ್ ಮಾಡಿದ್ದಾರೆ ಎಂಬುದು ಮುಖ್ಯ ಎಂದು ನಟರಾಜ್ ವಾದಿಸಿದರು. ಡಿ.ಕೆ. ಶಿವಕುಮಾರ್ ಪರ ಅಭಿಷೇಕ್ ಮನು ಸಿಂಘ್ವಿ ವಾದಿಸಿದರು.

ಲಕ್ಷ್ಮೀ ಹೆಬ್ಬಾಳ್ಕರ್ ವಿಚಾರಣೆ

ಡಿ. ಕೆ. ಶಿವಕುಮಾರ್ ವಿರುದ್ಧದ ಅಕ್ರಮ ಹಣ ಪತ್ತೆ ಪ್ರಕರಣದಲ್ಲಿ ಕಾಂಗ್ರೆಸ್ ಶಾಸಕಿ ಲಕ್ಷ್ಮೀ ಹೆಬ್ಬಾಳ್ಕರ್ ಅವರ ಹೆಸರು ಕೇಳಿಬಂದಿರುವ ಹಿನ್ನೆಲೆಯಲ್ಲಿ ಗುರುವಾರ ಜಾರಿ ನಿರ್ದೇಶನಾಲಯದ ಎದುರಿಗೆ ವಿಚಾರಣೆಗೆ ಹಾಜರಾದರು. ಇದೇ ವಿಚಾರವಾಗಿ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ್ದ ಹೆಬ್ಬಾಳ್ಕರ್, ಇ.ಡಿ ಅಧಿಕಾರಿಗಳು ನನಗೆ ನೀಡಿರುವ ಸಮನ್ಸ್ ಹಿಂದೆ ಸೇಡಿನ ರಾಜಕೀಯವಿದೆ ಎಂದು ಆರೋಪಿಸಿದ್ದರು. ಇ.ಡಿ ಅಧಿಕಾರಿಗಳಾದ ಸೌರಭ್ ಮೆಹ್ತಾ ಮತ್ತು ತಂಡ ವಿಚಾರಣೆ ನಡೆಸಿತು. ಡಿ.ಕೆ.ಶಿವಕುಮಾರ್ ಆಸ್ತಿಗೂ ನಿಮಗೂ ಏನು ಸಂಬಂಧ? ಮತ್ತು ತಾವು ಗಳಿಸಿರುವ ಆಸ್ತಿ-ಪಾಸ್ತಿ ಬಗ್ಗೆಯೂ ಲಕ್ಷ್ಮೀ ಹೆಬ್ಬಾಳ್ಕಗೆರ್ ಅವರಿಗೆ ಪ್ರಶ್ನೆ ಮೇಲೆ ಪ್ರಶ್ನೆ ಕೇಳಿದ್ದಾರೆ. ವಿಚಾರಣೆಯನ್ನು ಬೆಂಗಳೂರಿನಲ್ಲೇ ನಡೆಸಬೇಕೆಂದು ಲಕ್ಷ್ಮೀ ಮನವಿ ಮಾಡಿದ್ದರು ಎನ್ನಲಾಗಿದೆ. ಆದರೆ ಇ.ಡಿ ಯಿಂದ ಯಾವುದೇ ಪ್ರತಿಕ್ರಿಯೆ ಲಭ್ಯವಾಗದ ಕಾರಣ ಗುರುವಾರ ದೆಹಲಿಗೆ ತೆರಳಿ ವಿಚಾರಣೆಗೆ ಹಾಜರಾಗಿದ್ದರು.

ಚಿದು ನ್ಯಾಯಾಂಗ ಬಂಧನ ವಿಸ್ತರಣೆ

ದೆಹಲಿ: ಐಎನ್‌ಎಕ್ಸ್ ಮೀಡಿಯಾ ಭ್ರಷ್ಟಾಚಾರ ಪ್ರಕರಣಕ್ಕೆ ಸಂಬಂಧಿಸಿದಂತೆ ನ್ಯಾಯಾಂಗ ಬಂಧನದಲ್ಲಿರುವ ಮಾಜಿ ಕೇಂದ್ರ ಸಚಿವ ಪಿ.ಚಿದಂಬರಂ ಅವರ ನ್ಯಾಯಾಂಗ ಬಂಧನ ಅವಧಿಯನ್ನು ಅಕ್ಟೋಬರ್ 3ರ ವರೆಗೆ ವಿಸ್ತರಿಸಲಾಗಿದೆ. ಚಿದಂಬರಂ ನ್ಯಾಯಾಂಗ ಬಂಧನ ಅವಧಿಯನ್ನು ವಿಸ್ತರಿಸಬೇಕು ಎಂಬ ಸಿಬಿಐನ ಮನವಿಯನ್ನು ಪುರಸ್ಕರಿಸಿದ ವಿಶೇಷ ಕೋರ್ಟ್ ನ್ಯಾಯಾಧೀಶ ಅಜಯ್ ಕುಮಾರ್ ಕುಹರ್ ಈ ಆದೇಶ ನೀಡಿದ್ದಾರೆ. ಅಲ್ಲದೆ ಚಿದಂಬರಂ ಅವರು ವೈದ್ಯಕೀಯ ತಪಾಸಣೆಗೆ ಒಳಪಡಲು ಅವಕಾಶ ನೀಡಿದ್ದಾರೆ. ಆರೋಪಿಯನ್ನು ಜೈಲಿಗೆ ಕಳುಹಿಸಿದ ನಂತರ ಅವರ ಪರಿಸ್ಥಿತಿಯಲ್ಲಿ ಯಾವುದೇ ಬದಲಾವಣೆಯಾಗಿಲ್ಲ. ಹೀಗಾಗಿ ಚಿದಂಬರಂ ನ್ಯಾಯಾಂಗ ಬಂಧನ ಅವಧಿ ವಿಸ್ತರಿಸುವಂತೆ ಸಿಬಿಐ ಪರ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರು ಮನವಿ ಮಾಡಿದರು. ಇದಕ್ಕೆ ಆರೋಪಿ ಪರ ವಕೀಲ ಕಪಿಲ್ ಸಿಬಲ್ ವಿರೋಧ ವ್ಯಕ್ತಪಡಿಸಿದರು. 73 ವರ್ಷದ ಚಿದಂಬರಂ ಅವರು ಹಲವು ಆರೋಗ್ಯದ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಅವರಿಗೆ ವೈದ್ಯಕೀಯ ತಪಾಸಣೆಯ ಅಗತ್ಯ ಇದೆ ಎಂದು ಸಿಬಲ್ ವಾದಿಸಿದರು. ಹೀಗಾಗಿ ಕೋರ್ಟ್ ಚಿದಂಬರಂ ಆರೋಗ್ಯ ತಪಾಸಣೆಗೆ ಅನುಮತಿ ನೀಡಿದೆ.

ಯುದ್ಧ ವಿಮಾನದಲ್ಲಿ ರಾಜನಾಥ್ ತೇಜಸ್

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಸ್ವದೇಶಿ ನಿರ್ಮಿತ ತೇಜಸ್ ಲಘುಯುದ್ಧ ವಿಮಾನವನ್ನು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹಾರಿಸುವ ಮೂಲಕ, ತೇಜಸ್‌ನಲ್ಲಿ ಹಾರಾಟ ನಡೆಸಿದ ಮೊದಲ ರಕ್ಷಣಾ ಸಚಿವರಾದರು.

ಲಘು ಯುದ್ಧ ವಿಮಾನ-ತೇಜಸ್‌ನಲ್ಲಿ ಕೇಂದ್ರ ರಕ್ಷಣಾ ಸಚಿವ ರಾಜನಾಥ ಸಿಂಗ್ ಸಹ ಪೈಲೆಟ್ ಆಗಿ ಹಾರಾಟ ನಡೆಸುವಲ್ಲಿ ಯಶಸ್ವಿಯಾಗಿದ್ದಾರೆ. ಬೆಂಗಳೂರಿನ ಎಚ್ಎಎಲ್ ವಿಮಾನ ನಿಲ್ದಾಣದಲ್ಲಿ ಪೈಲೆಟ್ ಸಮವಸ್ತ್ರದೊಂದಿಗೆ ಗುರುವಾರ ತೇಜಸ್ ಲಘು ಯುದ್ಧ ವಿಮಾನದ ಹಾರಾಟದಲ್ಲಿ ಪಾಲ್ಗೊಂಡು ವಿಶೇಷ ಗಮನ ಸೆಳೆದರು.

→ 4

> ಇದೊಂದು ರೋಮಾಂಚನಕಾರಿ ಅನುಭವವಾಗಿತ್ತು. ಇದು ಸಾಕಷ್ಟು ಮೃದು ಹಾಗೂ ಆರಾಮದಾಯಕ ವಿಮಾನವಾಗಿದೆ. ನಾನು ಹಾರಾಟವನ್ನು ಆನಂದಿಸಿದೆ. ಹಾರಾಟ ನಡೆಸುವಾಗ ಪೈಲೆಟ್‌ನೊಂದಿಗೆ ಮಾತುಕತೆ ನಡೆಸುತ್ತ ಸಾಗಿದೆವು. ಕೆಲ ಕಾಲ ನಾನು ಕೂಡ ಪೈಲೆಟ್ ಸೂಚನೆಯಂತೆ ಕೆಲ ಕಾಲ ವಿಮಾನವನ್ನು ನಿಯಂತ್ರಿಸಿದೆ. ಇದೊಂದು ನನ್ನ ಜೀವಮಾನದ ಅದ್ಭುತ ಅನುಭವ
>
> **- ರಾಜನಾಥ್ ಸಿಂಗ್** ರಕ್ಷಣಾ ಸಚಿವ

ತೇಜಸ್ ವಿಶೇಷತೆ ಏನು?

ತೇಜಸ್ ಎಚ್ಎಎಲ್‌ನಲ್ಲಿ ನಿರ್ಮಿಸಲಾಗಿದೆ. 13 ಟನ್ ತೂಕದ ಈ ಅತ್ಯಾಧುನಿಕ ಫೈಟರ್ ಜೆಟ್ ಆಗಿದ್ದು, ಮೂರು ಟನ್ ತೂಕದ ಅತ್ಯಾಧುನಿಕ ಶಸ್ತ್ರಾಸ್ತ್ರ ಮತ್ತು ಬಾಂಬ್‌ಗಳನ್ನು ಕೊಂಡೊಯ್ಯುವ ಸಾಮರ್ಥ್ಯವಿದೆ. ಗಂಟೆಗೆ 1,350 ಕಿ.ಮೀ ವೇಗದಲ್ಲಿ ಮುನ್ನುಗ್ಗುವ ತೇಜಸ್ 500 ಬಾಂಬ್‌ಗಳನ್ನು ವೈರಿ ನೆಲೆಗಳ ಮೇಲೆ ಉಡಾಯಿಸುವ ಶಕ್ತಿ ಹೊಂದಿದೆ. ಈ ವಿಮಾನದಲ್ಲಿರುವ 73 ಕ್ಷಿಪಣಿಗಳು ಅಲ್ಪ ಅಂತರದ ಗುರಿಯನ್ನು ನಿಖರವಾಗಿ ತಲುಪ ಬಲ್ಲವು. ಗಗನದಲ್ಲೇ ವೈರಿ ವಿಮಾನಗಳು ಮತ್ತು ಅವುಗಳ ಕ್ಷಿಪಣಿಗಳನ್ನು ಹೊಡೆದುರುಳಿಸುವ ಹಾಗೂ ನೆಲದ ಮೇಲೆ ಇರುವ ಶತ್ರು ಸೇನಾ ನೆಲೆಗಳನ್ನು ಕರಾರುವಾಕ್ ಗುರಿಗಳ ಮೂಲಕ ಧ್ವಂಸಗೊಳಿಸಬಹುದಾಗಿದೆ. ಇದರಲ್ಲಿ ಅಳವಡಿಸಲಾಗಿರುವ ಮೆಷಿನ್‌ಗನ್‌ಗಳು ಏಕ ಕಾಲದಲ್ಲಿ ನಿರಂತರವಾಗಿ ಗುಂಡುಗಳನ್ನು ಹೊರ ಹೊಮ್ಮಿಸುವ ವ್ಯವಸ್ಥೆ ಹೊಂದಿದೆ. ಗುಂಡು ನಿರೋಧಕ ಗಾಜಿ ನೊಂದಿಗೆ ವಿಶೇಷ ಕಾಕ್‌ಪಿಟ್‌ನಲ್ಲಿ ಇಬ್ಬರು ಪೈಲೆಟ್‌ಗಳು ಕಾರ್ಯಾಚರಣೆ ನಡೆಸಬಹುದಾಗಿದೆ.

ಸದ್ಯದಲ್ಲೇ ಮಧ್ಯಂತರ ಚುನಾವಣೆ: ಕೋಡಿ ಭವಿಷ್ಯ

ಹಾವೇರಿ: ಮೈತ್ರಿ ಸರಕಾರಕ್ಕೆ ಹೆಚ್ಚು ಕಾಲ ಆಯುಷ್ಯವಿಲ್ಲ ಎಂದು ಭವಿಷ್ಯ ನುಡಿದಿದ್ದ ಕೋಡಿಮಠ ಸ್ವಾಮೀಜಿ, ಇದೀಗ ಬಿಜೆಪಿ ಸರಕಾರದ ಬಗ್ಗೆ ಭವಿಷ್ಯ ನುಡಿದಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿರುವ ಶಿವಾನಂದ ಶಿವಯೋಗಿ ರಾಜೇಂದ್ರ ಸ್ವಾಮೀಜಿ, 'ಕರ್ನಾಟಕದಲ್ಲಿ ಮಧ್ಯಂತರ ಚುನಾವಣೆ ಸನ್ನಿಹಿತ' ಎಂದು ಹೇಳಿದ್ದಾರೆ.

'ನಾನು ಮೊದಲೇ ಭವಿಷ್ಯ ಹೇಳಿದ್ದೇನೆ. 18 ತಿಂಗಳ ನಂತರ ಮತ ಚುನಾವಣೆ ಎಂದು. ಇದನ್ನು ಚುನಾವಣೆ ಪೂರ್ವದಲ್ಲಿ ಹೇಳಿದ್ದೆ. ಮೈತ್ರಿ ಸರಕಾರ 14 ತಿಂಗಳಿಗೆ ಪತನವಾಗಿದೆ. ಇನ್ನೂ ಕಾಲಾವಕಾಶ ಇದೆ. ಇನ್ನು ಮೂರ್ನಾಲ್ಕು ತಿಂಗಳು ಕಾದು ನೋಡಿ ಎಂದು ಒಗಟಾಗಿ ಹೇಳಿದ್ದಾರೆ. 'ಬೆಳೆ ಒಂದು, ಫಸಲು ಇನ್ನೊಂದು, ಯಾವುದೇ ಸರಕಾರ ಬಂದರೂ ಮತ ಕೇಳ್ತಾರೆ ಎಂದಿದ್ದೆ' ಎಂದು ಹೇಳುತ್ತಲೇ ಬಿಎಸ್‌ವೈ ಸರಕಾರ ಪತನದ ಮುನ್ಸೂಚನೆ ನೀಡಿದ್ದಾರೆ. ಕಾರ್ತಿಕ ಕಳೆಯುವವರೆಗೂ ಈ ಲಕ್ಷಣ ಇದೆ ಎಂದು ತಿಳಿಸಿದ್ದಾರೆ.

ರಾಜ್ಯಕ್ಕೆ ಜಲಕಂಟದ ಬಗ್ಗೆ ಮುನ್ಸೂಚನೆ ನೀಡಿದ್ದ ಸ್ವಾಮೀಜಿ, ಆಗಸ್ಟ್‌ನಲ್ಲಿ ಬಾಗಲಕೋಟೆಯ ಶಿವಯೋಗಿ ಮಂದಿರಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಸ್ವಾಮೀಜಿ ಇಡೀ ಜಗತ್ತು ಬೆಚ್ಚಿಬೀಳುವ ಆಘಾತವೊಂದು ಕಾದಿದೆ ಎಂದು ಹೇಳಿದ್ದರು. ಅದರಣತೆಯೇ ಭೀಕರ ಪ್ರವಾಹ ಎದುರಾಗಿ, ಕೇರಳ, ಮಹಾರಾಷ್ಟ್ರ, ಮಧ್ಯಪ್ರದೇಶ, ಕರ್ನಾಟಕ ಸೇರಿದಂತೆ ಹಲವೆಡೆ ಅತಿವೃಷ್ಟಿಯಾಗಿ ಅಪಾರ ಪ್ರಮಾಣದ ನಷ್ಟ ಉಂಟಾಯಿತು.

ಶಾ ಜತೆ ಎನ್‌ಆರ್‌ಸಿ ಚರ್ಚಿಸಿಲ್ಲ: ದೀದಿ

ದೆಹಲಿ: ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರೊಂದಿಗಿನ ಸಭೆಯಲ್ಲಿ ಬಂಗಾಳದ ರಾಷ್ಟ್ರೀಯ ಪೌರತ್ವ ನೋಂದಣಿ (ಎನ್ ಆರ್‌ಸಿ) ಕುರಿತು ಯಾವುದೇ ಚರ್ಚೆ ನಡೆದಿಲ್ಲ ಎಂದು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಗುರುವಾರ ಹೇಳಿದ್ದಾರೆ.

ನಾರ್ತ್ ಬ್ಲಾಕ್‌ನಲ್ಲಿ ಕೇಂದ್ರ ಗೃಹ ಸಚಿವರೊಂದಿಗಿನ ಸಭೆಯ ನಂತರ ಮಾತನಾಡಿದ ಅವರು, ಅಸ್ಸಾಂ ಎನ್‌ಆರ್‌ಸಿಯಿಂದ ಹೊರಗುಳಿದ 19 ಲಕ್ಷ ಜನರ ಭವಿಷ್ಯದ ಬಗ್ಗೆ ನಾನು ಗೃಹ ಸಚಿವರಿಗೆ ಪತ್ರ ಸಲ್ಲಿಸಿದ್ದೇನೆ. ಅಸ್ಸಾಂ ಎನ್‌ಆರ್‌ಸಿಯಲ್ಲಿ ಅನೇಕ ಬಾಂಗ್ಲಾ, ಗೂರ್ಖಾ ಮಾತನಾಡುವ ಜನರಿದ್ದಾರೆ. ಅವರ ಕುರಿತು ಸಾಕಷ್ಟು ಆತಂಕವಿದೆ ಎಂದರು.

ನಿನ್ನೆ ಪ್ರಧಾನಿ ನರೇಂದ್ರ ಮೋದಿಯವರೊಂದಿಗೆ ಪಶ್ಚಿಮ ಬಂಗಾಳವನ್ನು ಬಾಂಗ್ಲಾ ಎಂದು ಮರುನಾಮಕರಣ ಮಾಡುವ ಪ್ರಸ್ತಾಪವನ್ನು ಚರ್ಚಿಸಿದ್ದೇನೆ. ಅವರು ಈ ವಿಷಯವನ್ನು ಪರಿಶೀಲಿಸುತ್ತೇವೆ ಎಂಬ ಭರವಸೆ ನೀಡಿದ್ದಾರೆ ಎಂದು ಬ್ಯಾನರ್ಜಿ ಹೇಳಿದರು.

ಶಾರದಾ ಚಿಟ್ ಫಂಡ್ ಹಗರಣದಲ್ಲಿ ಕೋಲ್ಕತಾ ಮಾಜಿ ಪೊಲೀಸ್ ಆಯುಕ್ತ ರಾಜೀವ್ ಕುಮಾರ್ ಭಾಗಿಯಾಗಿರುವ ಪ್ರಶ್ನೆಗೆ ಉತ್ತರಿಸಿದ ಬ್ಯಾನರ್ಜಿ ಇದು ರಾಜಕೀಯ ಪ್ರೇರಿತ ಪ್ರಶ್ನೆಯಾಗಿದೆ ಎಂದು ಹೇಳಿದರು.

ಶಾ ಅವರೊಂದಿಗಿನ ಬ್ಯಾನರ್ಜಿ ಅವರ ಸಭೆ ಸುಮಾರು 40 ನಿಮಿಷಗಳ ಕಾಲ ನಡೆಯಿತು.

ನೀರವ್ ಮೋದಿಗೆ ಲಂಡನ್ ಜೈಲೇ ಗತಿ

ಲಂಡನ್: ಪಂಜಾಬ್ ನ್ಯಾಷನಲ್ ಬ್ಯಾಂಕ್ ಸೇರಿ ವಿವಿಧ ಬ್ಯಾಂಕ್‌ಗಳಿಗೆ 13 ಸಾವಿರ ಕೋಟಿ ರು.ಗೂ ಹೆಚ್ಚು ವಂಚಿಸಿ ಬ್ರಿಟನ್‌ಗೆ ಪರಾರಿಯಾಗಿ ಲಂಡನ್ ಜೈಲಿನಲ್ಲಿರುವ ವಜ್ರೋದ್ಯಮಿ ನೀರವ್ ಮೋದಿಗೆ ಅಕ್ಟೋಬರ್ 17ರವರೆಗೆ ಮತ್ತೆ ನ್ಯಾಯಾಂಗ ಬಂಧನ ವಿಧಿಸಿ ವೆಸ್ಟ್‌ಮಿನಿಸ್ಟರ್ ಮ್ಯಾಜಿಸ್ಟ್ರೇಟ್ ನ್ಯಾಯಾಲಯ ಗುರುವಾರ ಆದೇಶ ಹೊರಡಿಸಿದೆ.

ನೀರವ್ ಮೋದಿ ವಿಡಿಯೋ ಲಿಂಕ್ ಮೂಲಕ ಗುರುವಾರ ಕೋರ್ಟ್ ವಿಚಾರಣೆಯನ್ನು ಎದುರಿಸಿದರು. ಅಲ್ಲದೆ, ನೀರವ್ ಮೋದಿಯನ್ನು ಭಾರತಕ್ಕೆ ಗಡಿಪಾರು ಮಾಡುವುದಕ್ಕೆ ಸಂಬಂಧಪಟ್ಟ ವಿಚಾರಣೆಯನ್ನು 2020ರ ಮೇ ನಲ್ಲಿ ಕೈಗೆತ್ತಿಕೊಳ್ಳಲು ನಿರ್ಧರಿಸಿದ್ದಾಗಿ ನ್ಯಾಯಾಲಯ ತಿಳಿಸಿದೆ. ನೀರವ್ ಅವರನ್ನು ಭಾರತಕ್ಕೆ ಹಸ್ತಾಂತರ ಮಾಡುವ ಪ್ರಕ್ರಿಯೆ ಬಗ್ಗೆ 2020ರ ಮೇ 11 ರಿಂದ 15ರ ವರೆಗೆ 5 ದಿನಗಳ ಕಾಲ ವಿಚಾರಣೆ ನಡೆಸುವುದಾಗಿ ನ್ಯಾಯಾಧೀಶರು ಹೇಳಿದರು.

ನೀರವ್ ಮೋದಿ ಸದ್ಯ ನೈಋತ್ಯ ಲಂಡನ್‌ನ ವಂಡ್ಸ್‌ವರ್ತ್ ಜೈಲಿನಲ್ಲಿ ಇದ್ದಾರೆ. ಈಗಾಗಲೇ ನಾಲ್ಕು ಬಾರಿ ನೀರವ್ ಮೋದಿ ಜಾಮೀನು ಅರ್ಜಿ ಸಲ್ಲಿಸಿದ್ದರು. ಅಷ್ಟೂ ಬಾರಿಯೂ ತಿರಸ್ಕೃತಗೊಂಡಿದೆ.

ಒಕ್ಕಲಿಗ ಸಮುದಾಯಕ್ಕೆ ಮೇಯರ್ ಸ್ಥಾನ ನೀಡಲು ಬಿಜೆಪಿ ಚಿಂತನೆ

ಕಳೆದ 18 ವರ್ಷಗಳಿಂದ ಸಿಕ್ಕಿಲ್ಲ ಗೌಡರಿಗೆ ಮೇಯರ್ ಪಟ್ಟ

ಗೌಡರಿಗೆ ಕೆಂಪೇಗೌಡರೂರ ಸಾರಥ್ಯ!

ವೆಂಕಟೇಶ ಆರ್.ದಾಸ್ ಬೆಂಗಳೂರು

ಬೆಂಗಳೂರು ಮಹಾನಗರ ನಿರ್ಮಾಣದ ಕನಸನ್ನು ಸಾಕಾರಗೊಳಿಸಿ ಆಡಳಿತ ನಡೆಸಿದ ಕೆಂಪೇಗೌಡರ ಸಮುದಾಯಕ್ಕೆ ನಗರದ ಪ್ರಥಮ ಪ್ರಜೆ ಮೇಯರ್ ಪಟ್ಟ ಸಿಕ್ಕಿ ಸರಿಸುಮಾರು 18 ವರ್ಷಗಳೇ ಸಂದಿವೆ. ಈಗ ಈ ಕೊರತೆ ನೀಗುವ ಕ್ಷಣಗಳು ಹತ್ತಿರವಾಗುತ್ತಿದೆಯೇ?

ಸಾಮಾಜಿಕ ನ್ಯಾಯದನ್ವಯ ಎಲ್ಲ ಸಮುದಾಯಕ್ಕೂ ಅಧಿಕಾರದ ಅವಕಾಶ ಸಿಗಬೇಕೆಂಬ ಆಧುನಿಕ ಸಮಾಜದ ವಾದವೇನೋ ಸರಿಯೇ. ಆದರೆ, ನಾಡು ಕಟ್ಟಿದ ಸಮುದಾಯಕ್ಕೆ ಬಹುದಿನಗಳಿಂದ ನಾಯಕತ್ವ ದೊರಯಲಿಲ್ಲ ಎಂಬ ಕೊರಗು ಇರುವುದು ಕೂಡ ತಪ್ಪಲ್ಲ. ಇದರ ಭಾಗವಾಗಿ ಬಿಜೆಪಿ ಈ ಅವಧಿಯ ಕೊನೆಯ ಮೇಯರ್ ಸ್ಥಾನವನ್ನು ಒಕ್ಕಲಿಗರಿಗೆ, ಅದರಲ್ಲೂ ಗೌಡ ಸಮುದಾಯಕ್ಕೆ ನೀಡುವ ಮೂಲಕ ಒಕ್ಕಲಿಗರನ್ನು ಓಲೈಸುವ, ಸಮಾಜಕ್ಕೆ ನ್ಯಾಯ ಒದಗಿಸುವ ಜತೆಗೆ ತಮ್ಮ ಪಕ್ಷದ ಒಕ್ಕಲಿಗ ಮುಖಂಡರನ್ನು ತಣಿಸುವ ಮೂರು ಕಾರ್ಯಗಳನ್ನು ಒಂದೇ ಪ್ರಯೋಗದಲ್ಲಿ ಮಾಡುವ ಮೂಲಕ ಒಂದೇ ಕಲ್ಲಿನಲ್ಲಿ ಮೂರು ಹಕ್ಕಿ ಹೊಡೆಯಲು ನಿಂತಿದೆ.

ಬೆಂಗಳೂರು ಮಹಾನಗರದ 53ನೇ ಮೇಯರ್ ಆಯ್ಕೆಗೆ ದಿನಗಣನೆ ಆರಂಭವಾಗಿದೆ. ಇದೇ ತಿಂಗಳ 27ಕ್ಕೆ ಮೇಯರ್ ಚುನಾವಣೆ ನಡೆಯಲಿದೆ. ಮೈತ್ರಿ ಪಕ್ಷದೊಳಗಿನ ತಲ್ಲಣ ಮತ್ತು ರಾಜ್ಯದಲ್ಲಿ ಪಡೆದ ಅಧಿಕಾರ ಮೇಯರ್ ಪಟ್ಟವನ್ನು ಬಿಜೆಪಿ ಕಡೆಗೆ ಸುಲಭವಾಗಿ ವಾಲುವಂತೆ ಮಾಡಿದೆ ಎಂದರೆ ತಪ್ಪಾಗಲಾರದು. ಅನರ್ಹ ಶಾಸಕರ ಬೆಂಬಲಿಗರು ಮತ್ತು ಪಕ್ಷೇತರ ಸದಸ್ಯರ ಬೆಂಬಲ ಸುಲಭದಲ್ಲಿ ಬಿಜೆಪಿಗೆ ಸಿಗಲಿದ್ದು, ಬಿಜೆಪಿಯಿಂದ ಒಬ್ಬರು ಮೇಯರ್ ಆಗುವುದು ಬಹುತೇಕ ಖಚಿತ ಎನ್ನಲಾಗುತ್ತಿದೆ. ಆದರೆ, ಈ ಮೇಯರ್ ಸ್ಥಾನವನ್ನು ಯಾವ ಸಮುದಾಯಕ್ಕೆ ನೀಡಿದರೆ ರಾಜಕೀಯ ಲಾಭ ಹೆಚ್ಚು ಎಂಬ ಲೆಕ್ಕಾಚಾರವೀಗ ಶುರುವಾಗಿದೆ.

→ 2

ಶ್ರೀನಿವಾಸ್‌ಗೆ ಮೇಯರ್ ಪಟ್ಟ?

ಒಕ್ಕಲಿಗ ಸಮುದಾಯದ ಗೌಡರಿಗೆ ಮೇಯರ್ ಪಟ್ಟ ನೀಡಲೇಬೇಕು ಎಂದು ತೀರ್ಮಾನಿಸಿರುವ ಬಿಜೆಪಿ, ಕುಮಾರಸ್ವಾಮಿ ಲೇಔಟ್ ವಾರ್ಡ್‌ನ ಸದಸ್ಯ ಎಲ್. ಶ್ರೀನಿವಾಸ್ ಅವರನ್ನು ಮೇಯರ್ ಅಭ್ಯರ್ಥಿಯನ್ನಾಗಿ ಮಾಡಲು ತೀರ್ಮಾನಿಸಿದೆ ಎನ್ನಲಾಗುತ್ತಿದೆ. ಪದ್ಮನಾಭರೆಡ್ಡಿ, ಉಮೇಶ್ ಶೆಟ್ಟಿ, ಗುರುಮೂರ್ತಿ ರೆಡ್ಡಿ ಮೊದಲಾದವರು ಮೇಯರ್ ಸ್ಥಾನದ ಆಕಾಂಕ್ಷಿಗಳಾಗಿದ್ದರೂ, ಗೌಡ ಸಮುದಾಯಕ್ಕೆ ಮೇಯರ್ ಸ್ಥಾನ ನೀಡುವುದು ಬಹುತೇಕ ಖಚಿತ ಎನ್ನಲಾಗುತ್ತಿದೆ. ಗೌಡ ಸಮುದಾಯದಲ್ಲಿ ಕುಮಾರಸ್ವಾಮಿ ಲೇಔಟ್ ವಾರ್ಡ್‌ನಿಂದ ಮೂರು ಬಾರಿ ಆಯ್ಕೆಯಾಗಿರುವ ಎಲ್.ಶ್ರೀನಿವಾಸ್ ಮುಂಚೂಣಿ ಯಲ್ಲಿದ್ದು, ಅವರಿಗೆ ಸ್ಥಾನ ಸಿಗುವುದು ಬಹುತೇಕ ಖಚಿತವಾಗಿದೆ. ಆ ಮೂಲಕ ಗೌಡ ಸಮುದಾಯಕ್ಕೆ ಮೇಯರ್ ಸ್ಥಾನ ನೀಡಿದ್ದೇವೆ ಎಂಬುದು ಬಿಜೆಪಿಯ ತಂತ್ರಗಾರಿಕೆಯಾಗಿದೆ.

ಗಂಡಂದಿರಿಗೆ ಉರುಳಾದ ಹೆಂಡ್ತಿ ಕಾಟ!

ಬಾಲಕೃಷ್ಣ ಎನ್. ಬೆಂಗಳೂರು

ಆತ್ಮಹತ್ಯೆ ಮಾಡಿಕೊಳ್ಳುವುದೆಂದರೆ ಮಹಿಳೆಯರೇ ಎನ್ನುವ ಕಾಲವಿತ್ತು. ಆದರೆ, ಈ ಬಾರಿಯೂ ಪುರುಷರೇ ಅಗ್ರಸ್ಥಾನ ಪಡೆಯುವುದರಲ್ಲಿ ಅನುಮಾನವೇ ಇಲ್ಲ. ದೇಶದಲ್ಲಿ 2018ರಲ್ಲಿ 1 ಲಕ್ಷ 50 ಸಾವಿರಕ್ಕೂ ಹೆಚ್ಚು ವಿವಾಹಿತ ಗಂಡಸರು ಆತ್ಮಹತ್ಯೆ ಮಾಡಿಕೊಂಡಿರುವ ಕುರಿತು ರಾಷ್ಟ್ರೀಯ ಅಪರಾಧ ದಾಖಲೆ ಬ್ಯೂರೋ ವರದಿ ತಿಳಿಸಿತ್ತು. ಈ ಬಾರಿ ದುಪ್ಪಟ್ಟಾಗಿರುವುದರಲ್ಲಿ ಅನುಮಾನವೇ ಇಲ್ಲ.

ದೇಶದಲ್ಲಿ ಅತೀ ಹೆಚ್ಚು ಆತ್ಮಹತ್ಯೆ ವರದಿಯಾಗುವ ರಾಜ್ಯಗಳಲ್ಲಿ ಕರ್ನಾಟಕ ಮೊದಲನೆ ಸ್ಥಾನದಲ್ಲಿದೆ. ತ್ರಿಪುರ, ತಮಿಳುನಾಡು, ಆಂಧ್ರ ಪ್ರದೇಶ, ಪಶ್ಚಿಮ ಬಂಗಾಳ, ಕ್ರಮವಾಗಿ ನಂತರದ ಸ್ಥಾನದಲ್ಲಿವೆ. ಈ ರಾಜ್ಯಗಳಲ್ಲಿ ಆತ್ಮಹತ್ಯೆಗೆ ಶರಣಾಗುವ ಮಹಿಳೆ ಪುರುಷರ ಪ್ರಮಾಣದಲ್ಲಿ ಹೆಚ್ಚಿನ ಅಂತರವಿಲ್ಲ. ಆದರೆ, ಕೇರಳ ಛತ್ತಿಸಗಢದಲ್ಲಿ ಮಾತ್ರ ಮಹಿಳೆಯರಿಗೆ ಹೋಲಿಸಿದರೆ ಪುರುಷರ ಸಂಖ್ಯೆ ಜಾಸ್ತಿ ಇದೆ. ಆತ್ಮಹತ್ಯೆ ನಿಗ್ರಹಕ್ಕೆ ವಿಶ್ವಸಂಸ್ಥೆ ಸೂಚಿಸಿರುವ ಕ್ರಮಗಳ ಜಾರಿಗೆ ತರಲು ಬಹುತೇಕ ರಾಜ್ಯಗಳು ವಿಫಲವಾಗಿವೆ. 2030ರ ವೇಳೆಗೆ ಆತ್ಮಹತ್ಯೆ ಪ್ರಕರಣಗಳನ್ನು 3ನೇ ಒಂದು ಭಾಗಕ್ಕೆ ಇಳಿಸಲು ವಿಶ್ವಸಂಸ್ಥೆ ಗುರಿ ನಿಗದಿಪಡಿಸಿದೆ.

ರಾಜ್ಯದಲ್ಲಿ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವ ಪುರುಷರ ಸಂಖ್ಯೆ ದಿನೇ ದಿನೇ ಹೆಚ್ಚುತ್ತಿದೆ. ಅವರ ಆತ್ಮಹತ್ಯೆಗೆ ಮಹಿಳೆಯೇ ಕಾರಣವೆಂಬುದು ಅಚ್ಚರಿಯ ಸಂಗತಿಯಾಗಿದೆ. ಕೌಟುಂಬಿಕ ಕಲಹ, ಪತ್ನಿಯರು ನೀಡುವ ಕಿರುಕುಳದಿಂದ ಬೇಸತ್ತು ಆತ್ಮಹತ್ಯೆ ಮಾಡಿಕೊಳ್ಳುವ ಪುರುಷರ ಸಂಖ್ಯೆ ಅಧಿಕವಾಗುತ್ತಿದೆ. ತಮ್ಮ ಪರ ಇರುವ ಕಾನೂನನ್ನು ಮಹಿಳೆಯರು ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆ. ಕ್ಷುಲ್ಲಕ ಕಾರಣಕ್ಕೆ ಪುರುಷರು ಜೈಲು ಸೇರುವಂತೆ ಮಾಡುತ್ತಿದ್ದಾರೆ. ಹೀಗಾಗಿ ವಿವಾಹಿತ ಗಂಡಸರು ಆತ್ಮಹತ್ಯೆಗೆ ಶರಣಾಗುತ್ತಿದ್ದಾರೆ.

ಆತ್ಮಹತ್ಯೆ ಮಾಡಿಕೊಳ್ಳುತ್ತಿರುವ ಪುರುಷರಲ್ಲಿ ವಿದ್ಯಾವಂತರೇ ಹೆಚ್ಚಾಗಿದ್ದಾರೆ. ಇತ್ತೀಚಿಗೆ ಸಾಫ್ಟ್‌ವೇರ್ ಎಂಜಿನಿಯರ್‌ಗಳು ಹಾಗೂ ಖಾಸಗಿ ಕಂಪನಿಗಳಲ್ಲಿ ಕೆಲಸ ಮಾಡುತ್ತಿರುವವರೇ ಆತ್ಮಹತ್ಯೆಗೆ ಮುಂದಾಗುತ್ತಿದ್ದಾರೆ. ಕೈ ತುಂಬ ಸಂಬಳ ಪಡೆದರೂ ಜೀವನದಲ್ಲಿ ನೆಮ್ಮದಿ ಇಲ್ಲದ ಕಾರಣ ನೇಣಿಗೆ ಕೊರಳೊಡ್ಡುತ್ತಿದ್ದಾರೆ. ಪತಿ ಅಥವಾ ಅವರ ಮನೆಯವರ ಕಿರುಕುಳದಿಂದ ಬೇಸತ್ತು ಪತ್ನಿ ಆತ್ಮಹತ್ಯೆ ಎಂಬ ಸುದ್ದಿ ಸಂಪ್ರದಾಯವಾಗಿತ್ತು. ಆದರೆ, ಕಳೆದ ಐದು ವರ್ಷಗಳಿಂದ ಗಂಡಸರು ಹೆಚ್ಚಾಗಿ ಆತ್ಮಹತ್ಯೆಗೆ ಶರಣಾಗುತ್ತಿರುವುದು ಕಳವಳಕಾರಿ ಸಂಗತಿಯಾಗಿದೆ.

ಆತ್ಮಹತ್ಯೆಗೆ ಕಾರಣಗಳು

- ಪತ್ನಿಯಿಂದ ಕಿರುಕುಳ
- ಸುಳ್ಳು ಆರೋಪದಡಿ ದೂರು ದಾಖಲು
- ಅನೈತಿಕ ಸಂಬಂಧದ ಪ್ರಕರಣಗಳು
- ವಿಚ್ಛೇದನ ಪಡೆದ ನಂತರ ಮಕ್ಕಳನ್ನು ಬೇರ್ಪಡಿಸುವುದು
- ವಿಚ್ಛೇದನ ನಂತರ ಹಣ ಮತ್ತು ಆಸ್ತಿಗಾಗಿ ದೂರು

> ವಿವಾಹಿತ ಗಂಡು ಮಕ್ಕಳು ನೀಡಿರುವ ಕೇಸುಗಳು ಪೊಲೀಸ್ ಠಾಣೆಯಲ್ಲಿ ಪರಿಗಣಿಸುತ್ತಿಲ್ಲ. ತಮಗಾಗಿರುವ ಅನ್ಯಾಯ ಹೇಳಿಕೊಳ್ಳಲು ಸಮಾಜದಲ್ಲಿ ಸ್ಥಾನಮಾನ ಇಲ್ಲವಾಗಿದೆ. ಇದಕ್ಕಾಗಿ ನಮಗೂ ಒಂದು ಆಯೋಗ ಸ್ಥಾಪನೆ ಮಾಡಬೇಕಿದೆ.
>
> **-ಕುಮಾರ್ ಜಾಗೀರ್‌ದಾರ್**
> ಕ್ರಿಸ್ಪ್ ಸಂಸ್ಥೆಯ ಅಧ್ಯಕ್ಷ

ಪ್ರತ್ಯೇಕ ಆಯೋಗ ರಚಿಸಲು ಆಗ್ರಹ

ಸಂವಿಧಾನದಲ್ಲಿ ಹೆಣ್ಣು ಮತ್ತು ಗಂಡು ಇಬ್ಬರಿಗೂ ಸಮಾನ ಹಕ್ಕಿದೆ. ಎಲ್ಲ ಪುರುಷರೂ ಕೆಟ್ಟವರಲ್ಲ. ಹಾಗಂತ ಎಲ್ಲಾ ಮಹಿಳೆಯರೂ ಒಳ್ಳೆಯವರಲ್ಲ. ನಗರಗಳಲ್ಲಿ ಶೇ.75ರಷ್ಟು ಮಂದಿ ವಿದ್ಯಾವಂತ ಮಹಿಳೆಯರಿದ್ದಾರೆ. ಅವರಿಗೆ ಕಾನೂನು ತಿಳಿವಳಿಕೆಯೂ ಇದೆ. ಆದರೆ, ಕೆಲ ಮಹಿಳೆಯರು ಕೌಟುಂಬಿಕ ದೌರ್ಜನ್ಯ ಕಾಯ್ದೆ ದುರುಪಯೋಗಪಡಿಸಿಕೊಳ್ಳುತ್ತಿದ್ದಾರೆ. ಇದರಿಂದ ಅಮಾಯಕರು ನೋವು ಅನುಭವಿಸುತ್ತಿದ್ದಾರೆ. ಪ್ರಾಣಿಪಕ್ಷಿಗಳಿಗೂ ಆಯೋಗವಿದೆ. ಆದರೆ, ಪುರುಷರಿಗೆ ಯಾವ ಆಯೋಗವಿದೆ ಹೇಳಿ? ಪತ್ನಿ ಪೀಡಕರ ಪ್ರಕರಣಗಳನ್ನು ಮಹಿಳಾ ಆಯೋಗಕ್ಕೆ ಒಯ್ದರೆ ಅವರು ಇದು ನಮ್ಮ ವ್ಯಾಪ್ತಿಗೆ ಬರೋದಿಲ್ಲ ಅಂತಾರೆ. ನಾವು ಎಲ್ಲಿಗೆ ಹೋಗಬೇಕು? ಆತ್ಮಹತ್ಯೆ ಪ್ರಕರಣಗಳಲ್ಲಿ ವಿವಾಹಿತ ಪುರುಷರ ಸಂಖ್ಯೆ ಹೆಚ್ಚಿವೆ ಎಂದು ಅಂಕಿ-ಅಂಶಗಳು ಹೇಳುತ್ತವೆ. ಶೋಷಣೆಗೆ ಲಿಂಗತಾರತಮ್ಯವಿಲ್ಲ. ಹೆಂಡತಿಯಿಂದ ಶೋಷಣೆಗೀಡಾದ ಗಂಡ ದೂರು ಕೊಡಲು ಹೋದರೆ, ಪೊಲೀಸರೇ ನಗುತ್ತಾರೆ. ನೊಂದ ಪುರುಷರ ಸಮಸ್ಯೆ ಆಲಿಸಲು ಪುರುಷ ಆಯೋಗ ಬೇಕು ಎಂದು ಕ್ರಿಸ್ಪ್ ಸಂಸ್ಥೆಯ ಅಧ್ಯಕ್ಷ ಕುಮಾರ್ ಜಾಗೀರ್‌ದಾರ್ ತಿಳಿಸಿದ್ದಾರೆ.